**ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 3520/2021**

| | | | |
|---|---|---|---|
| **ಹೆಸರು** | **:** | **ಮಲ್ಲಿಕಾರ್ಜುನ** | **ಚಾ.ಸಾ. 3** |
| **ತಂದೆಯ ಹೆಸರು** | **:** | **ಸುಭಾಷ** | **ಪ್ರಾ.ಸಾ. 4** |
| **ವಯಸ್ಸು** | **:** | **34 ವರ್ಷ** | **ದಿನಾಂಕಃ 02-09-2024.** |
| **ಉದ್ಯೋಗ** | **:** | **ಕ್ಷೌರಿಕ** | |
| **ವಾಸಸ್ಥಳ** | **:** | **ಕನಕಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಪ್ರಾಸಾ 1, 2, ಚಾಸಾ 10 ಮತ್ತು 12 ರವರು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಗೆ ನಾನು ಈ ಮೊದಲು ನೋಡಿಲ್ಲ.

ಈಗ 3 ವರ್ಷಗಳ ಹಿಂದೆ ಚಂದಾಪುರದಲ್ಲಿರುವ ನನ್ನ ಅಕ್ಕನ ಮನೆಗೆ ಬಂದಿದ್ದೆ. ಆಗ ನಾನು ಚಂದಾಪುರ ಗಾಂಧಿ ಸರ್ಕಲ ಹತ್ತಿರ ನಿಂತಾಗ ಪೋಲಿಸರು ಬಂದು ಭಾವಚಿತ್ರ ಪಡೆದು ನನ್ನ ಹೆಬ್ಬೆರಳಿನ ಗುರುತು ಪಡೆದಿರುತ್ತಾರೆ.

ಈಗ ನೋಡುತ್ತಿರುವ ನಿಪಿ-1 ರ ಪಂಚನಾಮೆಯಲ್ಲಿ ನಾನು ಹೆಬ್ಬೆರಳಿನ ಗುರುತನ್ನು ಹಾಕಿದ್ದೇನೆ. ಈಗ ನೋಡುತಿರುವ ನಿಪಿ-2 ರ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಾನು ಹೆಬ್ಬೆರವಿನ ಗುರುತನ್ನು ಹಾಕುವ ಸಮಯಕ್ಕೆ ಪಡೆದಿದ್ದಾರೆ. ಯಾವ ಕಾರಣಕ್ಕಾಗಿ ಭಾವಚಿತ್ರ ಮತು ನನ್ನ ಹೆಬ್ಬೆರಳಿನ ಗುರುತನ್ನು ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಕರೆದ ಕಾರಣ ನಾನು ಹೋಗಿದ್ದೇನೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಪೋಲಿಸರು ಪಂಚಾಮೆಗೆ ಬಂದಿದ್ದಾರೆ ಎಂದು ನನಗೆ ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಆಗ ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಆರೋಪಿಯ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಾಸಾ 1, 2, ಚಾಸಾ 10 ಮತ್ತು 12 ರವರು ಗೊತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SAS ವಕೀಲರಿಂದಃ</u>**

ನಿಪಿ-1 ರ ಸಂಗತಿಗಳು ನನಗೆ ಗೊತ್ತಿಲ್ಲ ಮತ್ತು ಪೋಲಿಸರು ಖಾಲಿ ಕಾಗದದ ಮೇಲೆ ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ .ದಂ. ಚಿಂಚೋಳಿ**